**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಆಡಳಿತ-ಎ/ದೈ.ಶಿ.ಬಡ್ತಿ/03/2014-15.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ: -01-2017.
07-02-2017

# ಜ್ಞಾಪನ

ವಿಷಯ:- ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರುಗಳ ಅರ್ಹತಾ ಪಟ್ಟಿಯನ್ನು ದಿನಾಂಕ 31-12-2015 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಡಿ 2009 ದಿನಾಂಕ 15-05-2014. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕ 29-05-2014.

2. ನಿರ್ದೇಶಕರು, ಪ್ರೌಢಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ ಸಿ4(2) ಪ್ರೌ.ಶಾ.ಶಿ/ಉ.ಬಡ್ತಿ-29/2012-13. ದಿನಾಂಕ 13-05-2014.

3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಪತ್ರ ಸಂಖ್ಯೆ ಸಿ10. ಪ್ರೌ.ಶಾ.ಅ/ಸ್ಥಾ.ಪ/ಸ.ಶಿ/ಉ.ಬಡ್ತಿ-33/2012-13. ದಿನಾಂಕ 17-04-2013.

4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಗುಲಬರ್ಗಾ,ಇವರ ಪತ್ರ ಸಂಖ್ಯೆ ಸಿ4(1)ಪ್ರೌ.ಶಾ/ಸ್ನಾತಕ/ಜೇ.ಪಟ್ಟಿ-15/2012-13. ದಿನಾಂಕ 05-02-2013.

*****

ಉಲ್ಲೇಖ-1 ರ ಸರ್ಕಾರದ ಅಧಿಸೂಚನೆಯಲ್ಲಿ ಇಲಾಖೆಯ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸಿದೆ. ಸದರಿ ನಿಯಮಗಳಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಗ್ರೇಡ್-1 ದೈಹಿಕ ಉಪನ್ಯಾಸಕರ ಹುದ್ದೆಗಳ ಪೈಕಿ ಬಡ್ತಿ ಕೋಟಾದ ಅಡಿ ಸರ್ಕಾರಿ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕ ವೃಂದದಿಂದ, ಬಡ್ತಿ ನೀಡಿ ತುಂಬಬಹುದಾಗಿದೆ.

ಉಲ್ಲೇಖ-2 ಮತ್ತು 3 ರಲ್ಲಿ ಬೆಂಗಳೂರು ಮತ್ತು ಧಾರವಾಡ ವಿಭಾಗದ ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರುಗಳ ಮಾಹಿತಿಯನ್ನು ಆಯುಕ್ತಾಲಯಗಳಿಂದ ಪಡೆಯಲಾಗಿದೆ. ಅದರಂತೆ ಎರಡು ಆಯುಕ್ತಾಲಯಗಳ ಅಧೀನದಲ್ಲಿ ಬರುವ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರುಗಳ ಅಥವಾ ತತ್ಸಮಾನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ನಾತಕೋತ್ತರ ಪದವಿ ಪಡೆದ ಗ್ರೇಡ್-1 ದೈಹಿಕ ಶಿಕ್ಷಕರುಗಳ ಒಟ್ಟಾರೆ ಅರ್ಹತಾ ಪಟ್ಟಿಯನ್ನು ಜೇಷ್ಠತಾ ಆಧಾರದ ಮೇಲೆ ತಯಾರಿಸಲಾಗಿದೆ.

ಉಲ್ಲೇಖ-4ರಲ್ಲಿ ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿನ ಗುಲಬರ್ಗಾ ಆಯುಕ್ತಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ. ಈ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರುಗಳ ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪಟ್ಟಿಯನ್ನು ಪಡೆಯಲಾಗಿದೆ. ಅದರಂತೆ ಅರ್ಹತಾ ಪಟ್ಟಿಯನ್ನು ಜೇಷ್ಠತಾ ಆಧಾರದ ಮೇಲೆ ತಯಾರಿಸಲಾಗಿದೆ.

..2

ರಾಜ್ಯವ್ಯಾಪಿ ಸ್ಥಳೀಯ ವೃಂದದ ಒಂದು ಅರ್ಹತಾ ಪಟ್ಟಿಯನ್ನು ಪ್ರತ್ಯೇಕವಾಗಿ ಮತ್ತು ಉಳಿಕೆ ಮೂಲ ವೃಂದದ ಕ್ರೋಢೀಕೃತ ಅರ್ಹತಾ ಪಟ್ಟಿಯನ್ನು ದಿನಾಂಕಃ 16-08-2016 ರ ಒಳಗಾಗಿ ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿದೆ. ಈ ಪಟ್ಟಿಗಳು ಇಲಾಖೆಯ ಅಂತರ್ಜಾಲ www.pue.kar.nic.in ವಿಳಾಸದಲ್ಲಿ ಅವಲೋಕಿಸ ಬಹುದಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ.

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾರವಾಢ, ಇವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ, ಇವರಿಗೆ ಮಾಹಿತಿಗಾಗಿ.
4. ಸಂಬಂಧಿಸಿದ ಗ್ರೇಡ್-1 ದೈಹಿಕ ಶಿಕ್ಷಕರುಗಳು ಇವರಿಗೆ ಮಾಹಿತಿಗಾಗಿ. ಇವರಿಗೆ ಮಾಹಿತಿಗಾಗಿ.
5. ಇ-ಆಡಳಿತ ಶಾಖೆ, ಪ.ಪೂ.ಶಿ.ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
6. ಕಛೇರಿ ಪ್ರತಿ.